# ‘ಆಫ್ ದಿ ರೆಕಾರ್ಡ್’ ಇಲ್ಲದ ಗಟ್ಟಿಗಿತ್ತಿ

ಹೆಜ್ಜೆಗಳಲ್ಲಿ ಮೊದಲ ಉತ್ಸಾಹ ಇರಲಿಲ್ಲ. ಮನಸ್ಸು ಬಹುಪಾಲು ನಾಸ್ಟಾಲ್ಜಿಕ್. ಆ ಮಗ ಹಾಗಾದ, ಈ ಮಗ ಹಾಗೆ ಮಾಡಬೇಕಿತ್ತು, ಎರಡನೇ ಮಗನನ್ನು ನಟಿಸುವ ಆಸೆಯಿದ್ದ ನಿರ್ದೇಶಕ ಮುಗಿಸಿಹಾಕಿದ, ಆ ಸಿನಿಮಾದಲ್ಲಿ ಹಿಂದಿ ಸಂಭಾಷಣೆ ಅತಿಯಾಯಿತು; ಅದಕ್ಕೇ ಸೋತಿತು, ನಮ್ಮ ಯಜಮಾನರಿಗಿದ್ದ ರೇಂಜ್ ಮುಂದೆ ಇವೆಲ್ಲಾ ಏನೂ ಅಲ್ಲ... ಹೀಗೆ ಅಷ್ಟೇನೂ ಅಳೆದೂ ತೂಗದೆ ಸಲೀಸಾಗಿ ಮಾತನಾಡಿದರು. ಕಚೇರಿಯಲ್ಲಿ ತಾವು ತೊಡಗಿಕೊಂಡ ಬಹುತೇಕ ದಿನಗಳ ನೆನಪು ಅವರಿಗೆ ಚೆನ್ನಾಗಿಯೇ ಇತ್ತು. ಮಗ ಆಗಷ್ಟೇ ನಟಿಸಿದ್ದ ಪೌರಾಣಿಕ ಚಿತ್ರವೊಂದು ಸೋತಿದ್ದಕ್ಕೆ ಸ್ಪಷ್ಟವಾಗಿ ಕಾರಣಗಳನ್ನು ಪಟ್ಟಿಮಾಡತೊಡಗಿದರು.

ಆತ್ಮವಿಮರ್ಶೆ, ಆತ್ಮಾಭಿಮಾನ, ಕನ್ನಡದ ಕುರಿತ ಕಾಳಜಿ, ಬದಲಾಗುತ್ತಿರುವ ಕಾಲ, ಚಿತ್ರರಂಗದ ತವಕ ತಲ್ಲಣಗಳು, ನಾಯಕತ್ವದ ಕೊರತೆ ಎಲ್ಲದರ ಕುರಿತು ಅಧಿಕಾರಯುತವಾಗಿ ಮಾತನಾಡಿದರು. ತಾವು ಕೆಲಸ ತೆಗೆಸಿದ್ದ ಸಂಗೀತ ನಿರ್ದೇಶಕರು, ಸಂಭಾಷಣೆಕಾರರಿಂದ ತಿದ್ದಿಸಿದ ಸಾಲುಗಳು, ಒಂದಾದ ಮೇಲೆ ಒಂದರಂತೆ ಓದುತ್ತಾ ಕುಳಿತ ಕಾದಂಬರಿಗಳು, ಅವುಗಳಲ್ಲಿ ತಮಗೆ ಸಿನಿಮಾ ಮಾಡಬಹುದು ಅನ್ನಿಸಿದ್ದು ಹೇಗೆ, ಅವುಗಳಲ್ಲಿ ಸಿನಿಮಾ ಆಗಿ ಗೆದ್ದದ್ದು ಯಾವುವು... ಹೀಗೆ ಸಣ್ಣ ಪುಟ್ಟ ವಿವರಗಳು ಅವರ ನಾಲಗೆಯ ತುದಿಯಲ್ಲಿ.

ಅಗಾಧ ನೆನಪಿನ ಶಕ್ತಿ ಅವರದ್ದು. ದಶಕಗಟ್ಟಲೆ ದೊಡ್ಡ ಸಂಸಾರ, ಮೇರುನಟನ ಕಾಲ್‌ಷೀಟ್, ಚಿತ್ರ ನಿರ್ಮಾಣದ ವ್ಯವಹಾರ ಎಲ್ಲವನ್ನೂ ನಿಭಾಯಿಸಿದ ಗಟ್ಟಿಗಿತ್ತಿ ಅವರಲ್ಲವೇ? ಆ ಅನುಭವವೇ ಅವರಲ್ಲಿ ದೊಡ್ಡ ಮಟ್ಟದ ಆತ್ಮವಿಶ್ವಾಸ ತುಂಬಿತ್ತು. ‘ಆಫ್ ದಿ ರೆಕಾರ್ಡ್’ ಎಂಬುದು ಯಾವುದೂ ಇಲ್ಲ ಎಂಬಂಥ ಧಾಟಿ. ದೊಡ್ಡವರು–ಚಿಕ್ಕವರು, ಅನುಭವಿಗಳು–ಅನನುಭವಿಗಳು ಎಂಬ ಭೇದ ಭಾವವಿಲ್ಲದೆ ಎಲ್ಲರನ್ನೂ ಏಕರೀತಿಯಲ್ಲಿ ವಿಮರ್ಶಿಸುವ ಧಾರ್ಷ್ಟ್ಯ.

ತಾಸುಗಟ್ಟಲೆ ಹಳೆಯದ್ದೆಲ್ಲವನ್ನೂ ಪೋಸ್ಟ್‌ಮಾರ್ಟಮ್ ಮಾಡಿದ ಅವರು ಆಮೇಲೆ ಈಚಿನ ದಿನಗಳ ವಿಷಯಕ್ಕೆ ಬಂದರು. ಮೊದಲು ಅವರಿಲ್ಲದೆ ಸಿನಿಮಾ ಸ್ಕ್ರಿಪ್ಟ್ ಚರ್ಚೆ ಪೂರ್ಣವಾಗುತ್ತಿದ್ದುದೇ ವಿರಳ. ಅವರೇ ಹೇಳಿಕೊಂಡಂತೆ ಈಗ ಕಾಲ ಬದಲಾಗಿದೆ. ಹಾಗೆನ್ನುತ್ತಾ ನಿಟ್ಟುಸಿರು ದಾಟಿಸಿ ಅವರು ಸುಮ್ಮನಾದರು.

ವರ್ಷ ಮೂರು ಕಳೆದವು. ಮತ್ತದೇ ಗಟ್ಟಿಗಿತ್ತಿ. ಮನಸ್ಸು ಈಗಲೂ ಗಟ್ಟಿ. ದೇಹ ಮಾತ್ರ ದಣಿದಿತ್ತು. ಪದೇಪದೇ ಆಸ್ಪತ್ರೆಗೆ ಎಡತಾಕಿದ ಸುಸ್ತು ಮುಖದಲ್ಲಿ ಸ್ಪಷ್ಟ. ಹೆಚ್ಚೆಂದರೆ ಐದು ನಿಮಿಷ ಅಷ್ಟೇ ಒಂದೇ ಸ್ಥಿತಿಯಲ್ಲಿ ಕೂರಲು ಸಾಧ್ಯ. ಆಗೀಗ ಕಾಲುಚಾಚಿಕೊಳ್ಳಬೇಕು. ದಿಂಬಿಗೆ ಒರಗಿ ವಿರಮಿಸಬೇಕು.

ಮತ್ತೆ ಅವರು ನಾಸ್ಟಾಲ್ಜಿಕ್ ಆಗಿ ಮಾತನಾಡುವಾಗ ಅದೇ ಹುಮ್ಮಸ್ಸು. ಮಕ್ಕಳ ವಿಷಯ ಬಂದಾಗ ಮಾತ್ರ ಕಣ್ಣುಗಳು ಸಣ್ಣಗಾದವು. ಆಗಾಗ ಪೂರ್ತಿ ಕಣ್ಣುಮುಚ್ಚಿ ನೆನಪಿಸಿಕೊಂಡು, ಅಳೆದೂ ತೂಗಿದಂತೆ ಮಾಡಿ ಮಾತು ಮುಂದುವರಿಸಿದರು. ಈಗಲೂ ‘ಆಫ್ ದಿ ರೆಕಾರ್ಡ್’ ಎಂಬುದು ಇರಲಿಲ್ಲ. ಸಿನಿಮಾ ಚರ್ಚೆಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡದ ದೇಹ, ಮನಸ್ಸಿನದ್ದೇ ಅವರಿಗೆ ಚಿಂತೆ. ಆಗೀಗ ಮಕ್ಕಳ ಚಿತ್ರದ ತುಣುಕುಗಳನ್ನು ಟಿ.ವಿ.ಯಲ್ಲಿ ನೋಡಿ ಯಾವ ಕೋನದಲ್ಲಿ ಅವರು ತಮ್ಮ ಯಜಮಾನರನ್ನು ನೆನಪಿಸುತ್ತಾರೆ ಎಂಬುದನ್ನಂತೂ ಮಗುವಿನಂತೆ ಹೇಳಿಕೊಂಡರು.

ಕೊನೆಗೆ ಮತ್ತೊಂದು ನಿಟ್ಟುಸಿರು.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68